

ಸಾಲು ಸಾಲು ಹಣತೆಗಳ ಬೆಳಕಿನೊಂದಿಗೆ, ಕಣ್ಣು-ಕಿವಿಗಳನ್ನು ತುಂಬುವ ಪಟಾಕಿಗಳ ಹೊಳಪು ಹಾಗೂ ಸದ್ದಿನ ಸಮೀಕರಣವೇ ದೀಪಾವಳಿ ಹಬ್ಬ. ದೀಪಾವಳಿಯೊಂದಿಗೆ ತಳುಕು ಹಾಕಿಕೊಂಡಿರುವ ಬೆಳಕು ಹಾಗೂ ಶಬ್ದಗಳ ಪ್ರಮೇಯವನ್ನು ಬಿಡಿಸುತ್ತಾ ಹೋದರೆ, ಇಡೀ ಪ್ರಕೃತಿಯೇ ಹಬ್ಬ ಆಚರಿಸುತ್ತಿರುವಂತೆ ಕಾಣಿಸುತ್ತದೆ. ಬೆಳಕು ಹಾಗೂ ಶಬ್ದಗಳ ಜಾಡಿನಲ್ಲಿ ಶತಮಾನಗಳಿಂದ ಸಾಗುತ್ತಿರುವ ವಿಜ್ಞಾನ, ಹೊಸ ಕಾಣ್ಕೆಗಳನ್ನು ಕಂಡುಕೊಳ್ಳುತ್ತಲೇ ಇದೆ. ವಿಜ್ಞಾನಿಯೊಬ್ಬರ ಕಣ್ಣೋಟದ ಈ ಸಂಚಿಕೆಯ 'ಸುಧಾ ವಿಶೇಷ' ಬರಹ, ದೀಪಗಳ ಹಬ್ಬದ ಸಂಭ್ರಮವನ್ನು ಕಟ್ಟಿಕೊಡುವುದರ ಜೊತೆಗೆ, ಬುವಿ-ನಭಗಳ ಕುತೂಹಲಕಾರಿ ಸಂಗತಿಗಳನ್ನು ಸಹೃದಯರ ಮುಂದಿಡುತ್ತಿದೆ; ಪರಿಸರ ಕಾಳಜಿಯ ಹೊಣೆಗಾರಿಕೆಯನ್ನು ನೆನಪಿಸುತ್ತಿದೆ.

■ **ಡಾ. ಬಿ.ಆರ್. ಗುರುಪ್ರಸಾದ್**

*ಲೇಖಕರು ಬೆಂಗಳೂರಿನ 'ಜವಹರಲಾಲ್ ನೆಹರು ತಾರಾಲಯ'ದ ನಿರ್ದೇಶಕರು ಹಾಗೂ 'ಇಸ್ರೋ'ದ ನಿವೃತ್ತ ವಿಜ್ಞಾನಿ*